# ಟೆಂಟ್ ಶಾಲೆಗಳು

**ಪರಿಕಲ್ಪನೆ :**

ಶಾಲೆಯಿಂದ ಮಕ್ಕಳು ಹೊರಗುಳಿಯಲು ಅನೇಕ ಕಾರಣಗಳಲ್ಲಿ ವಲಸೆ ಕೂಡ ಪ್ರಮುಖವಾದದ್ದು, ಜೀವನೋಪಾಯಕ್ಕಾಗಿ ಜನರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುತ್ತಾರೆ. ಕರ್ನಾಟಕದಲ್ಲಿ ವಲಸೆಯು ಕೆಲವು ವಿಶಿಷ್ಟ ಲಕ್ಷಣಗಳಿಂದ ಕೂಡಿದೆ. ಈಶಾನ್ಯ ಕರ್ನಾಟಕದ ವಲಸೆಯು ಗಡಿ ರಾಜ್ಯಗಳಾದ ಗೋವಾ, ಮಹಾರಾಷ್ಟ್ರ, ಆಂಧ್ರಪ್ರದೇಶಗಳಿಗೆ ಮತ್ತು ದೂರದ ಬೆಂಗಳೂರಿನ ಕಡೆಗೂ ಇದೆ. ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಕೇರಳ ಮತ್ತು ತಮಿಳುನಾಡಿಗೆ ಜನ ವಲಸೆ ಹೋಗುತ್ತಾರೆ. ದಕ್ಷಿಣ ಕರ್ನಾಟಕದ ಪಟ್ಟಣ ಪ್ರದೇಶಗಳಿಗೆ ಹೊರ ರಾಜ್ಯಗಳಿಂದಲೂ ಜನ ವಲಸೆ ಬರುತ್ತಾರೆ. ಇದು ಆವಕ ವಲಸೆ. ಈಶಾನ್ಯ ಭಾಗ ಮತ್ತು ವಾಯುವ್ಯ ಭಾಗದ ವಲಸೆ ಜಾವಕ ವಲಸೆ ಆಗಿದೆ.

ವಲಸೆಯು ಪ್ರಮುಖವಾಗಿ ಕೃಷಿ ಆಧಾರಿತ ಚಟುವಟಿಕೆಗಳಿಗೆ ಮತ್ತು ಗಣಿಗಾರಿಕೆಯ ಪ್ರದೇಶಗಳಿಗೆ ಕಟ್ಟಡ ನಿರ್ಮಾಣ ಕಾರ್ಯಕ್ಕೆ, ಕಲ್ಲುಗಣಿ ಪ್ರದೇಶಗಳಿಗೆ, ಇಟ್ಟಿಗೆ ಸುಡುವ ಕಾರ್ಖಾನೆ ಸ್ಥಳಗಳಿಗೆ, ರಸ್ತೆ ನಿರ್ಮಾಣ, ನಾಲಾ ನಿರ್ಮಾಣ ಇರುವ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ವಸಲೆ ಹೋಗುವ ಜನ ತಮ್ಮೊಂದಿಗೆ ಶಾಲೆಯಲ್ಲಿ ಕಲಿಯುತ್ತಿರುವ ತಮ್ಮ ಮಗುವನ್ನು ಸಹ ಕರೆದೊಯ್ಯುತ್ತಾರೆ. ಇದರಿಂದ ಇಂತಹ ವಿದ್ಯಾರ್ಥಿಗಳ ಕಲಿಕೆಯ ಮೇಲೆ ವಲಸೆ ಪ್ರತಿಕೂಲ ಪರಿಣಾಮ ಬೀರುವುದು. ಹೆಚ್ಚು ಸಂದರ್ಭಗಳಲ್ಲಿ ಶಾಲೆಯನ್ನು ಮಧ್ಯದಲ್ಲೇ ಬಿಡುವವರ ಸಂಖ್ಯೆ ಹೆಚ್ಚಳವಾಗುತ್ತದೆ. ಈ ಸಮಸ್ಯೆಯನ್ನು ನಿಯಂತ್ರಿಸಲು ಬಳಸುವ ಕಾರ್ಯತಂತ್ರವೇ ಗುಡಾರ (ಟೆಂಟ್) ಶಾಲೆ.

ಗುಡಾರ ಶಾಲೆಗಳನ್ನು ವಲಸಿತ ಬಿಡಾರಗಳ ಸ್ಥಳಗಳಲ್ಲಿ ಸ್ಥಾಪಿಸಬೇಕಾಗುತ್ತದೆ. ಗುಡಾರ ಶಾಲೆಯ ಮಕ್ಕಳು ಶಾಲೆಯನ್ನು ತೊರೆದ ಮಕ್ಕಳು ಎಂದು ಪರಿಭಾವಿಸಲಾಗಿದ್ದು, ಈ ಮಕ್ಕಳು ಔಪಚಾರಿಕ ಪಠ್ಯಕ್ರಮವನ್ನು ಅಭ್ಯಾಸ ಮಾಡುತ್ತಾರೆ. ವಲಸೆಯ ಅವಧಿ ಸೀಮಿತವಾದದು ಎಂದು ಭಾವಿಸಿ ಗುಡಾರ ಶಾಲೆಗಳನ್ನು 6 ತಿಂಗಳವರೆಗೆ ನಡೆಸಬೇಕು ಎಂಬ ಯೋಜನೆ ಇದ್ದರೂ ಅನೇಕ ವೇಳೆ ಈ ಅವಧಿ ಹೆಚ್ಚು ಕಡಿಮೆ ಆಗುವ ಸಾಧ್ಯತೆ ಇದೆ. ಅಂದರೆ ವಲಸಿತ ಕುಟುಂಬಗಳು 6 ತಿಂಗಳಿಗಿಂತ ಹೆಚ್ಚು ಅವಧಿ ಇದ್ದಲ್ಲಿ ಟೆಂಟ್ ಶಾಲೆಯನ್ನು ಮುಂದುವರೆಸಬಹುದು.

**ಉದ್ದೇಶಗಳು :**

1. ಪೋಷಕರೊಡನೆ ವಲಸೆ ಬಂದ ಮಕ್ಕಳ ವಿದ್ಯಾಭ್ಯಾಸವನ್ನು ಮುಂದುವರೆಸುವುದು
2. ವಲಸಿತ ಮಕ್ಕಳು ಶಾಲಾ ಸನ್ನಿವೇಶದಿಂದ ವಂಚಿತರಾಗುವುದನ್ನು ನಿಯಂತ್ರಿಸುವುದು
3. ವಲಸೆ ಮುಗಿದು ಮಗು ತನ್ನ ಹಿಂದಿನ ಶಾಲೆಗೆ ಮರಳಿದಾಗ ಫಲಿತಾಂಶವನ್ನು ಪ್ರಕಟಿಸಲು ಅನುಕೂಲವಾಗುಂತೆ ಕಲಿಕೆಯ ಮಟ್ಟವನ್ನು ವೃದ್ಧಿಸುವುದು
4. ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ಅಂಶವಾದ ಸಾರ್ವತ್ರಿಕ ಧಾರಣವನ್ನು (Universal Retention) ಕಾಯ್ದುಕೊಳ್ಳುವುದು.

**ವ್ಯಾಪ್ತಿ :**

- ಎಲ್ಲಿ ವಲಸೆಯೋ ಅಲ್ಲಿ ಶಾಲೆ.
- ವಲಸಿತ ಕುಟುಂಬಗಳು ಚಲಿಸಿದಂತೆ ಗುಡಾರ ಶಾಲೆಗಳು ಸಂಬಂಧಿಸಿದ ಸ್ಥಳದೆಡೆಗೆ ಸ್ಥಳಾಂತರ.
- ಬೇರೆ ತಾಲ್ಲೂಕಿಗೆ/ಜಿಲ್ಲೆಗೆ ಹೋದಲ್ಲಿ ಟೆಂಟನ್ನು ಇಡಿಯಾಗಿ ಹಸ್ತಾಂತರಿಸಬಹುದು.
- ಇದೊಂದು ತಾತ್ಕಾಲಿಕ ಶಾಲಾ ವ್ಯವಸ್ಥೆ.

- ವಲಸಿತ ಮಕ್ಕಳ ಶಿಕ್ಷಣವು (ಟೆಂಟ್ ಶಾಲೆಗಳ ಸ್ಥಾಪನೆ ಮತ್ತು ಅಲ್ಲಿನ ಶಿಕ್ಷಣ) ಆಯಾ ಸ್ಥಳದ ಬಿ.ಇ.ಓ. ಗಳದ್ದಾಗಿರುತ್ತದೆ.
- ಮಗು/ಪೋಷಕರ ಹೇಳಿಕೆಯ ಮೇಲೆ ಹಾಗೂ ವಯಸ್ಸಿನ ಆಧಾರದಲ್ಲಿ ಆ ತರಗತಿಗಳಿಗೆ ಮಗುವನ್ನು ಸೇರಿಸಬಹುದು.
- ವಲಸಿತ ಕುಟುಂಬಗಳ ಬಿಡಾರಗಳು ಕಾಣಿಸಿಕೊಂಡ ತಕ್ಷಣವೇ ಕಾರ್ಯ ಪ್ರವೃತ್ತರಾಗಿ ಟೆಂಟ್ ಶಾಲೆ ಸ್ಥಾಪಿಸುವುದು.
- ವಲಸಿತ ಕಾರ್ಡಗಳನ್ನು ನೀಡಿದ್ದಲ್ಲಿ ಇದರ ಆಧಾರದಂತೆ ಮಕ್ಕಳಿಗೆ ಕಲಿಕೆ ಮಾಡಿಸುವುದು.
- ಮಗು ನಿಮ್ಮ ಶಾಲೆಯಿಂದ ಹೋಗುವಾಗ ವಲಸೆ ಕಾರ್ಡ್‌ಗಳನ್ನು ಕಡ್ಡಾಯವಾಗಿ ನೀಡಿ.
- 6–14 ರವರೆಗಿನ ವಯೋಮಿತಿಯ ಮಕ್ಕಳು ಟೆಂಟ್ ಶಾಲೆಯ ಪರಿಧಿಯೊಳಗೆ ಬರುತ್ತಾರೆ.
- ಶಾಲೆ ಬಿಟ್ಟ ವಲಸಿತ ಮಕ್ಕಳಿಗಾಗಿ ಟೆಂಟ್ ಶಾಲೆ ಎಂಬ ಪರಿಕಲ್ಪನೆ ಇರುವುದಾದರೂ, ಶಾಲೆಗೆ ಸೇರದಿರುವ ವಲಸಿತ ಮಕ್ಕಳೂ ಸಹ ಗುಡಾರ ಶಾಲೆಯ ಕಕ್ಷಿದಾರ ಮಕ್ಕಳಾಗುತ್ತಾರೆ.
- ಟೆಂಟ್ ಶಾಲೆಗಳು ಶಿಕ್ಷಣ ಇಲಾಖೆಯಿಂದ ಮಾತ್ರ ನಡೆಸಲ್ಪಡುತ್ತವೆ.
- ಇಲ್ಲಿಗೆ ಬೋಧಕರಾಗಿ 25 ಮಕ್ಕಳಿಗೆ ಒಬ್ಬರಂತೆ ಸರ್ಕಾರಿ ಶಾಲಾ ಶಿಕ್ಷಕರನ್ನು ಮಾತ್ರ ನಿಯೋಜಿಸಬೇಕು.
- ಅನ್ಯ ಭಾಷಾ ವಲಸಿತ ಮಕ್ಕಳು ಬಂದಲ್ಲಿ ಮತ್ತು ಅವರು ಇಚ್ಚಿಸಿದರೆ ಅವರ ಮಾತೃ ಭಾಷೆಯಲ್ಲಿ ಶಿಕ್ಷಣ ಕೊಡಿಸಲು ವ್ಯವಸ್ಥೆಗೊಳಿಸುವುದು.

**ಯಾರಿಗಾಗಿ ಈ ಶಾಲೆ – ಎಲ್ಲಿ ಪ್ರಾರಂಭಿಸಬಹುದು :**

- ವಲಸೆ ಕಾರಣಕ್ಕಾಗಿ ಅರ್ಧದಲ್ಲೇ ಬಿಟ್ಟು ಬಂದಿರುವ ವಲಸಿಗ ಮಕ್ಕಳಿಗಾಗಿ ಈ ಶಾಲೆ.
- ವಲಸೆ ಗುಡಾರಗಳ ಹತ್ತಿರದಲ್ಲಿ ಶಾಲೆ ಇದ್ದರೂ ಹಲವಾರು ಕಾರಣಗಳಿಗಾಗಿ ಶಾಲೆಗೆ ಹೋಗದಿರುವ (ಶಾಲೆಯಿಂದ ಹೊರಗುಳಿದ) ಮಕ್ಕಳಿಗೆ.
- ಎಲ್ಲಿ ಬಿಡಾರಗಳಿವೆಯೋ ಅಲ್ಲಿಯೇ ಗುಡಾರ ಶಾಲೆ.
- ಆದರೆ ಸ್ಥಳಾಭಾವ ಮತ್ತು ಇತರ ಕಾರಣಗಳಿಂದ ಹತ್ತಿರದ ಶಾಲೆಗಳ ಆವರಣದಲ್ಲಿ ಕೂಡ ಗುಡಾರ ಶಾಲೆಗಳನ್ನು ನಡೆಸಬಹುದು.
- ಗುಡಾರ ಶಾಲೆಗಳು ಎಂದರೆ ಅಕ್ಷರಶಃ ಗುಡಾರಗಳೇ ಆಗಿರಬೇಕು ಎಂದಲ್ಲ. ಬದಲಿಗೆ ಶಾಲೆ ನಡೆಸಲು ಯೋಗ್ಯವಾದ ಕಟ್ಟಡ ಅಥವಾ ಇತರ ಸೂಕ್ತ ಸ್ಥಳಗಳಾಗಬಹುದು.

**ಗುಡಾರ ಶಾಲೆಯ ಮುಂದುವರಿಕೆ ಯಾವಾಗ ಮತ್ತು ಹೇಗೆ ?**

ಸಾಮಾನ್ಯವಾಗಿ ವಲಸಿತ ಕುಟುಂಬಗಳು 6 ತಿಂಗಳವರೆಗೆ ವಲಸೆ ಹೋಗಿ ಪುನಃ ಸ್ವಂತ ಸ್ಥಳಕ್ಕೆ ವಾಪಸ್ ಹೋಗುತ್ತಾರೆ ಎಂಬುದು ಸಾಮಾನ್ಯ ಕಲ್ಪನೆ. ಆದರೆ ಇತ್ತೀಚೆಗೆ ನಗರ ಪ್ರದೇಶಗಳಿಗೆ ಬಂದ ಕುಟುಂಬಗಳು ಅಲ್ಲೇ ನೆಲೆ ನಿಲ್ಲುವುದು ಸಾಮಾನ್ಯವಾಗಿದೆ. ಇಂತಹ ಪ್ರಸಂಗಗಳಲ್ಲಿ ಟೆಂಟ್ ಶಾಲೆಗಳನ್ನು 6 ತಿಂಗಳಿಗೆ ಸೀಮಿತಗೊಳಿಸಬೇಕೇ? ಎನ್ನುವುದು ಸಾಮಾನ್ಯ ಪ್ರಶ್ನೆ. ಇಂತಹ ಸನ್ನಿವೇಶಗಳಲ್ಲಿ ಕೆಳಗಿನ ಕ್ರಮಗಳನ್ನು ಕೈಗೊಳ್ಳಬಹುದು.

* ಹತ್ತಿರದಲ್ಲಿ ಶಾಲೆ ಇದ್ದಲ್ಲಿ ಹಾಗು ಪೋಷಕರು ಒಪ್ಪಿದಲ್ಲಿ ಹತ್ತಿರದ ಶಾಲೆಗೆ ಸೇರಿಸಿ.
* ಸಾಧ್ಯವಾದರೆ ಅದೇ ಸ್ಥಳದಲ್ಲಿ ಕಟ್ಟಡ ಕಟ್ಟಲು ಸಾಧ್ಯವಿದ್ದಲ್ಲಿ ಹೊಸ ಶಾಲೆಯನ್ನು ಪ್ರಾರಂಭಿಸಿ. ಹತ್ತಿರದಲ್ಲಿ ಸೂಕ್ತ ಕಟ್ಟಡ ಸಿಕ್ಕರೂ ಶಾಲೆ ಪ್ರಾರಂಭಿಸಿ.
* ಕಟ್ಟಡ ಕಟ್ಟಲು ಸ್ಥಳಾವಕಾಶ ಇಲ್ಲದಿದ್ದಲ್ಲಿ ಟೆಂಟ್ ಶಾಲೆಯನ್ನು ಮುಂದುವರೆಸಿ, ಈ ಸಂಧರ್ಭದಲ್ಲಿ 6 ತಿಂಗಳಿಗಿಂತ ಹೆಚ್ಚು ಅವದಿ ಉಳಿಯುವ ಮಕ್ಕಳನ್ನು ಹತ್ತಿರದ ಶಾಲೆಗೆ ದಾಖಲಿಸಿ. ಉಳಿದ ಮಕ್ಕಳು ಟೆಂಟ್ ಶಾಲೆಯಲ್ಲಿ ವ್ಯಾಸಂಗ ಮಾಡಲು ಅವಕಾಶ ಕಲ್ಪಿಸಿ. ಹಾಗು ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು (ಗ್ರೇಡು) ಹತ್ತಿರದ ಶಾಲಿಗೆ ಕಳುಹಿಸಿ ಫಲಿತಾಂಶ ಕೊಡಿಸಿ. ಈ ಮಕ್ಕಳು ಆ ಶಾಲೆ ಬಿಡುವಾಗ ವಲಸೆ ಕಾರ್ಡಗೆ ಬದಲಾಗಿ ಟಿ.ಸಿ. ಯನ್ನು ದಾಖಲು ಮಾಡಿಕೊಂಡಿರುವ ಶಾಲೆ ನೀಡಲಿ.

* 1 ರಿಂದ 4 ನೇ ತರಗತಿಯ ಮಕ್ಕಳನ್ನು ಟೆಂಟ್ ಶಾಲೆಯಲ್ಲಿ ಉಳಿಸಿಕೊಂಡು, 5ರಿಂದ ಮುಂದಿನ ತರಗತಿಯ ಮಕ್ಕಳನ್ನು ಹತ್ತಿರದ ಶಾಲೆಗೆ ಹೋಗಲು ವ್ಯವಸ್ಥೆಗೊಳಿಸುವುದು. ಆದರೆ ಅವಶ್ಯಕತೆ ಇದ್ದಲ್ಲಿ ಹಿರಿಯ ತರಗತಿ ಮಕ್ಕಳಿಗೂ ಬೋಧಿಸಬಹುದು.
* ಹತ್ತಿರದ ಶಾಲೆ ಈ ಪ್ರದೇಶಗಳಿಂದ ದೂರವಿದ್ದಲ್ಲಿ / ಮುಖ್ಯ ರಸ್ತೆಗಳನ್ನು ದಾಟಿ ಹೋಗಬೇಕಾದ ಸಂದರ್ಭದಲ್ಲಿ ಈ ಮಕ್ಕಳಿಗೆ ಎಸ್ಕಾರ್ಟ್ ಅಥವಾ ಸಂಚಾರಿ ಸೌಲಭ್ಯವನ್ನು ಒದಗಿಸಬಹುದು.

**ಯಾರು ನಡೆಸಬೇಕು :**

- ಟೆಂಟ್ ಶಾಲೆಗಳನ್ನು ಇಲಾಖೆ ಮಾತ್ರ ನಡೆಸಬೇಕು. ಏಕೆಂದರೆ ವಲಸೆ ಬಂದ ತಕ್ಷಣ ಟೆಂಟ್ ಶಾಲೆ ತೆರೆಯಬೇಕು. ಎನ್.ಜಿ.ಓ ಗಳು ಭಾಗವಹಿಸುವಾಗ ಅನೇಕ ಪ್ರಕ್ರಿಯೆಗಳು ಇಲಾಖೆ ಮತ್ತು ಎನ್.ಜಿ.ಓ ಗಳ ಮಧ್ಯೆ ನಡೆಯುತ್ತವೆ. ವಿಡಾರ ಅಲ್ಪ ಅವಧಿಯದಾಗಿದ್ದರೆ ಒಡಂಬಡಿಕೆ ವರ್ತಿಸುವ ವೇಳೆಗೆ ಗುಡಾರಗಳೇ ಇಲ್ಲವಾಗಬಹುದು. ಆದ್ದರಿಂದ ಟೆಂಟ್ ಶಾಲೆಗಳನ್ನು ಇಲಾಖೆಯೇ ಶಾಲೆಗಳ ಮೂಲಕ ನಡೆಸಬೇಕು ಅಥವಾ ನೇರವಾಗಿ ಬಿ.ಅರ್.ಸಿ/ಸಿ.ಎ.ಇ.ಒ ಉಸ್ತುವಾರಿಯಲ್ಲಿ ನಡೆಸಬಹುದು.

**ಹಣಕಾಸು – ಖರ್ಚಿನ ವಿವರ :**

- ರಾಜ್ಯ ಕಛೇರಿಯ ಹಣಕಾಸು ಹಂಚಿಕೆಯನ್ನು ಆಧರಿಸಿ ಅಗತ್ಯವಿರುವ ಹಣಕಾಸನ್ನು ಬ್ಲಾಕ್‌ಗಳಿಗೆ ಬಿಡುಗಡೆ ಮಾಡುವುದು.
- ಜಿಲ್ಲಾ ಕಛೇರಿಯು ಹಣವನ್ನು ಶಾಲೆ ಪ್ರಾರಂಬಿಸಲು ತಕ್ಷಣ ಬಿಡುಗಡೆ ಮಾಡಬೇಕು, ವ್ಯತ್ಯಯಗಳಿಗೆ ಅವಕಾಶವಿಲ್ಲ.
- ಇದರ ಅನುಸಾರ ಬ್ಲಾಕ್‌ಗೆ ಸಂಬಂಧಿಸಿದ ಶಾಲೆಗಳ ಎಸ್.ಡಿ.ಎಂ.ಸಿ. ಖಾತೆಗೆ ಹಣವನ್ನು ಜಮಾ ಮಾಡುವುದು. ಅಥವ ನೇರವಾಗಿ ಬಿ.ಆರ್.ಸಿ/ಸಿ.ಎ.ಇ.ಓ ಗಳು ಕೇಂದ್ರ ಪ್ರಾರಂಭಿಸಬಹುದು.
- 05–06ರಲ್ಲಿ ಟೆಂಟ್ ಶಾಲೆಯ ಘಟಕ ವೆಚ್ಚ ಪ್ರತಿ ಮಗುವಿಗೆ 6 ತಿಂಗಳಿಗೆ 1700/– ರೂ. ಇತ್ತು. ಇದು 06–07 ರಿಂದ ರೂ. 1500/– ಆಗಿದೆ.

**ಹಣ ಹಂಚಿಕೆ (25 ಮಕ್ಕಳಿಗೆ)**

| ವಿವರ | 05–06 | 06–07 | ಪ್ರತಿ ಮಗುವಿಗೆ (06–07ರಿಂದ) | (09–10ರಿಂದ) |
|---|---|---|---|---|
| – ಘಟಕ ವೆಚ್ಚ ಪ್ರತಿ ಮಗುವಿಗೆ ಘಟಕವೆಚ್ಚ | 1,700 | 1,500 | 1,500 | 1500 |
| – ಟೆಂಟ್ ನಿರ್ಮಿಸಲು | 15,000 | 15,000 | 600 | 600 |
| – ಮಕ್ಕಳ ಕಲಿಕಾ ಸಾಮಗ್ರಿ | | 2,500 | 100 | 100 |
| – ಸಾದಿಲ್ವಾರು | 5,000 | 1,250 | 50 | 50 |
| – ಬೋಧನೋಪಕರಣ | | 1,500 | 60 | 60 |
| – ಸ್ವ.ಸೇ.ಗೌ.ಸಂಭಾವನೆ | 22,500 | 6,000 | 240 | 240 |
| – ಸ್ನಾಕ್ಸ್ | | 11,250 | 450 | 450 |
| – | ಒಟ್ಟು | 37,500 | 1,500 | 1,500 |

**ಟಿಪ್ಪಣಿ :–**

- ತರಬೇತಿಯನ್ನು ಸ್ವಯಂ ಸೇವಕ ಮತ್ತು ಅಧ್ಯಾಪಕರಿಗೆ ಸಿ.ಆರ್.ಪಿ./ಬಿ.ಆರ್.ಸಿ. ಯವರು ನೀಡುವುದು.
- ಟೆಂಟ್ ಶಾಲೆಯು 6 ತಿಂಗಳಿಗಿಂತ ಹೆಚ್ಚು ಅವದಿ ನಡೆದರೆ ಮೇಲೆ ಸೂಚಿಸಿರುವ ದರಕ್ಕೆ ಸಂವಾದಿಯಾಗಿ ಹಣವನ್ನು ಖರ್ಚು ಮಾಡುವುದು. ಆದರೆ –ಟೆಂಟ್ ನಿರ್ಮಾಣ, C G ಬೋಧನೋಪಕರಣ ಕೊಳ್ಳುವಾಗ ಅದು ಸಮರ್ಥನೀಯವಾಗಿದ್ದರೆ ಮಾತ್ರ ಖರ್ಚು ಮಾಡಬಹುದು. ಇದರ ಅನುಮೊದನೆಯನ್ನು ಡಿ.ವೈ.ಪಿ.ಸಿ ರವರು ಪರಿಶೀಲಿಸಿ ನೀಡಬಹುದು.

**ಹಣ ಬಳಕೆಗೆ ಮುಂದೆ ಸೂಚಿಸಿರುವ ಸಂಗತಿಗಳು ಸಲಹಾತ್ಮಕ ಮತ್ತು ಖರ್ಚು ಮಾಡಬೇಕಾದ ನೇರವನ್ನು ಸೂಚಿಸುತ್ತದೆ:**

- ಸಾದಿಲ್ವಾರು ಹಣದಲ್ಲಿ ಕೇಂದ್ರಕ್ಕೆ ಬೇಕಾದ ಒಂದು ಟ್ರಂಕ್, ರಿಜಿಸ್ಟರ್‌ಗಳು ಬಿಳಿಯ ಹಾಳೆ, ಗುಡಾರ ಶಾಲೆಯ ಹೆಸರು ಬರೆಸಲು, ಕುಡಿಯುವ ನೀರಿಗಾಗಿ ಮತ್ತಿತರ ಸಾಂದರ್ಭಿಕ ವೆಚ್ಚಗಳಿಗೆ ರೂ. 1250/– ಬಳಸಬಹುದು.
- ಮಕ್ಕಳಿಗೆ ಬೇಕಾದ ಕಲಿಕಾ ಸಾಮಗ್ರಿಗಳಿಂದ ಸ್ಕೇಲು, ಬಳಪ, ನೋಟ್ ಪುಸ್ತಕ, ಪೆನ್, ಪೆನ್ಸಿಲ್, ಜಿಯೋಮಿತ್ರಿ ಬಾಕ್ಸ್, ಬಣ್ಣದ ಪೆನ್ಸಿಲ್ / ಕ್ರೆಯಾನ್ ಬಾಕ್ಸ್‌ಗಾಗಿ ರೂ. 2500/– ಬಳಸಬಹುದು.
- ರೂ. 1500/–ನ್ನು ಛಾರ್ಟ್, ಮಾಡೆಲ್, ಭೂಪಟ, ಸ್ಕೆಚ್‌ಪೆನ್, ಡ್ರಾಯಿಂಗ್ ಶೀಟ್, ಇತ್ಯಾದಿ ಬೋಧನೆ–ಕಲಿಕೆಗೆ ನೆರವಾಗುವ ಸಾಮಾಗ್ರಿಗಳನ್ನು ಕೊಳ್ಳಲು, ತಯಾರಿಕೆ ಬೇಕಾಗುವ ಸಾಮಗ್ರಿಗಳನ್ನು ಖರೀದಿಸಲು ಬಳಸಬಹುದು.
- ಪ್ರತಿ ಮಗುವಿಗೆ ದಿನವೊಂದಕ್ಕೆ ರೂ. 3/– ರಂತೆ (ತಿಂಗಳಿಗೆ ಶಾಲೆ ನಡೆಯುವ ಸರಾಸರಿ 25 ದಿನಗಳಂತೆ) 11,250/– ರೂ.ಗಳನ್ನು 6 ತಿಂಗಳ ಅವಧಿಗೆ ಮಧ್ಯಾಹ್ನದ ಉಪಹಾರ/ಸ್ನಾಕ್ಸ್ ಕೊಡಲು ನಿಗದಿ ಮಾಡಿದೆ. ಈ ಹಣವನ್ನು ಸ್ಥಳೀಯ/ ಸಮೀಪದ ಶಾಲೆಗಳಿಂದ ಮಧ್ಯಾಹ್ನ ಉಪಹಾರವನ್ನು ಸಾಗಾಣಿಕೆ ಮಾಡಿ ಪಡೆಯಲು ಮತ್ತು ಮಗುವಿಗೆ ಸ್ನಾಕ್ಸ್ ನೀಡಲು ಬಳಸಬೇಕು.
- ಮಧ್ಯಾಹ್ನ ಉಪಹಾರ ನೀಡುವ ಎಲ್ಲಾ ಸಂದರ್ಭಗಳಲ್ಲಿ ಶಾಲೆ ಮುಗಿಯುವ ವೇಳೆಯಲ್ಲಿ ಮಕ್ಕಳಿಗೆ ತಪ್ಪದೆ ಸ್ನಾಕ್ಸ್ ನೀಡುವುದು. ಅನಿವಾರ್ಯ ಕಾರಣಗಳಿಂದ ಮಧ್ಯಾಹ್ನ ಉಪಹಾರವನ್ನು ಸಮೀಪದ ಶಾಲೆಗಳಿಂದ ಪಡೆಯಲು ಸಾಧ್ಯವಾಗದೆ ಇದ್ದಾಗ ಮಧ್ಯಾಹ್ನದ ಅವಧಿಯಲ್ಲಿ ಸ್ನಾಕ್ಸ್ ನೀಡಬಹುದು. ಸ್ನಾಕ್ಸ್‌ಗಾಗಿ ಮಕ್ಕಳಿಗೆ ಹಾಲು, ಬ್ರೆಡ್, ಬಿಸ್ಕಟ್, ಮೊಟ್ಟೆ ಹಣ್ಣುಗಳನ್ನು ನೀಡುವುದು.
- ಬೇರೆ ರಾಜ್ಯಗಳಿಂದ ಸ್ವಯಂ ಸೇವಕರನ್ನು ನೇಮಿಸಿದಾಗ ಅವರ ಗೌರವ ಧನವು ತಿಂಗಳಿಗೆ 1500/– ರೂ.ವರೆಗೆ ಇರುತ್ತದೆ. ಇವರು ಬಂದು ಹೋಗುವ ರೈಲು/ಬಸ್ಸಿನ (ಭೋದಕನ) ಪ್ರಯಾಣ ವೆಚ್ಚವನ್ನು ಅನುಮತಿ ಪಡೆದು ಬಳಸಬಹುದು.

**ಗುಡಾರ ನಿರ್ಮಾಣಕ್ಕೆ ಕೆಲವು ಸಲಹೆಗಳು**

- ಕಬ್ಬಿಣದ ಆಂಗಲ್ ಮತ್ತು ಹೊದಿಕೆಗೆ Fiber ಶೀಟ್‌ಗಳನ್ನು ಬಳಸಿ
- ಮಕ್ಕಳು ಚಟುವಟಿಕೆಗಳಲ್ಲಿ ತೊಡಗಲು ಅಗತ್ಯವಾದ ವಿಸ್ತೀರ್ಣದ ಟೆಂಟ್ ಶಾಲೆಗಳನ್ನು ನಿರ್ಮಿಸಬೇಕು (ಕನಿಷ್ಠ 12 ಅಡಿ x 16 ಅಡಿ)
- ನೆಲವನ್ನು ಸಮತಟ್ಟುಗೊಳಿಸಿ ಟಾರ್ಪಾಲ್/ಜಮಖಾನ ಬಳಸುವುದು ಕಡ್ಡಾಯ.
- ಟೆಂಟ್‌ನ ಸುತ್ತಲ ಭಾಗವನ್ನು ಅರ್ಧದಷ್ಟು ಶೀಟ್‌ಗಳ ಸಹಾಯದಿಂದ ಮುಚ್ಚಬೇಕು. ಗಾಳಿಯಾಡಲು ಮೇಲ್ಭಾಗ ಖಾಲಿ ಬಿಡಿ. ಆದರೆ ಮಳೆ ಇರಚಲು ಬರದಂತೆ ನಿರ್ಮಿಸಿ.
- ಟೆಂಟ್‌ಶಾಲೆ ಮುಗಿದ ಬಳಿಕ ಈ ಎಲ್ಲಾ ವಸ್ತುಗಳನ್ನು ಬೇರೆಡೆ ಟೆಂಟ್ ಶಾಲೆ ಪ್ರಾರಂಭಿಸಲು ಅಥವಾ ಕೇಂದ್ರ ಶಾಲೆಯ ಅಗತ್ಯವನ್ನು ಪೂರೈಸಲು ಪುನರ್ಬಳಕೆ ಮಾಡಲು ಯೋಚಿಸಿ.
- ಗುಡಾರವನ್ನು ನಿರ್ಮಿಸಲು 15,000/– ರೂ.ಗಳನ್ನು ನಿಗಧಿಗೊಳಿಸಲಾಗಿದೆ. ಈ ಹಣದಲ್ಲಿ ಮಕ್ಕಳ ಕಲಿಕೆಗೆ ಪೂರಕವಾದ ವಾತಾವರಣವುಳ್ಳ ಟೆಂಟ್ ಶಾಲೆಯನ್ನು ನಿರ್ಮಿಸಲಿಕ್ಕೆ ಸಾಧ್ಯವಿದೆ. ಅಗತ್ಯ ಸಹಕಾರವನ್ನು ಬಿಡಾರದಲ್ಲಿ ವಾಸ್ತವ್ಯ ಹೂಡಿದವರಿಂದ ಸ್ಥಳೀಯ ಸಮೂಹದಿಂದ ಪಡೆಯುವುದು. ಸ್ಥಳಾಂತರಕ್ಕೆ ಯೋಗ್ಯವಿರುವ ವಸ್ತುಗಳನ್ನು ಬಳಸಿ ಗುಡಾರವನ್ನು ನಿರ್ಮಿಸುವುದರಿಂದ ಬೇರೆಡೆ ಗುಡಾರ ನಿರ್ಮಿಸುವಾಗ ಇದೇ ವಸ್ತುಗಳನ್ನು ಬಳಸಿ ಖರ್ಚನ್ನು ಮಿತಿಗೊಳಿಸಬಹುದು.

**ಶಿಕ್ಷಕರ/ಸ್ವಯಂ ಸೇವಕರ ನಿಯೋಜನೆ/ನೇಮಕಾತಿ ಮತ್ತು ತರಬೇತಿ :**

- ಟೆಂಟ್ ಶಾಲೆಗಳನ್ನು ಇಲಾಖೆಯೇ ನಡೆಸುತ್ತದೆ. ಕಾರಣ ನುರಿತ ಅಧ್ಯಾಪಕರು ಈ ಕಾರ್ಯತಂತ್ರಕ್ಕೆ ಅಗತ್ಯವೆಂದು ಪರಿಗಣಿಸಲಾಗಿದೆ. ಹಾಗಾಗಿ ಆಸಕ್ತಿ ಮತ್ತು ಚಿಣ್ಣರ ಅಂಗಳ ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳ ಕಾರ್ಯತಂತ್ರದಲ್ಲಿ ದುಡಿದು ಪರಿಶ್ರಮವುಳ್ಳ ಹಾಗೂ ಶಿಕ್ಷಣ ವಂಚಿತ ಮಕ್ಕಳ ಕುರಿತು ನೈಜ ಕಾಳಜಿಯುಳ್ಳ ಆಧ್ಯಾಪಕ/ಪಿಕೆಯರನ್ನು ಗುರುತಿಸಿ ಗುಡಾರ ಶಾಲೆಗಳಿಗೆ ತಪ್ಪದೆ ನಿಯೋಜಿಸುವುದು. (ಅನುಬಂಧದ ಸುತ್ತೋಲೆ ನೋಡಿ)
- ಬೇರೆ ರಾಜ್ಯದ ಮಕ್ಕಳು ವಲಸೆ ಬಂದ ವೇಳೆಯಲ್ಲಿ ಆ ಭಾಷೆಯಲ್ಲಿ ಬೋಧಿಸಬಲ್ಲ ಶಿಕ್ಷಕರನ್ನೇ ನಿಯೋಜಿಸಬೇಕು. ಒಂದು ವೇಳೆ ಇಂತಹ ಶಿಕ್ಷಕರಾರೂ ದೊರೆಯದಿದ್ದಲ್ಲಿ ಉನ್ನತ ಅಧಿಕಾರಿಗಳ ಗಮನಕ್ಕೆ ಈ ವಿಷಯವನ್ನು ಕೂಡಲೇ ತರುವುದು ಹಾಗೂ ಸೂಕ್ತ ಉತ್ತರ ದೊರೆಯುವವರೆಗೆ ಹಿಂಬಾಲಿಕೆ ಪ್ರಕ್ರಿಯೆ ನಡೆಸುವುದು. ಪಠ್ಯ ಪುಸ್ತಕ ಅಥವಾ ಸೇತುಬಂಧ ಸಾಮಗ್ರಿ ನಮ್ಮ ರಾಜ್ಯದಲ್ಲಿ ದೊರೆಯದಿದ್ದರೆ ಸಂಬಂಧಿಸಿದ ರಾಜ್ಯದ ರಾಜ್ಯ ಯೋಜನಾ ನಿರ್ದೇಶಕರನ್ನು ಸಂಪರ್ಕಿಸಿ. ಈ ಮಾಹಿತಿಯನ್ನು ಕೂಡಲೇ ಕರ್ನಾಟಕದ ಕೇಂದ್ರ ಕಛೇರಿ ಗಮನಕ್ಕೆ ತರುವುದು. ಪುಸ್ತಕಗಳು ಬರುವವರೆಗೆ ರಾಜ್ಯದ ಚಿಣ್ಣರ ಅಂಗಳ ಪುಸ್ತಕ ಬಳಸಿ.
- ಸ್ವಯಂ ಸೇವಕರ ನೇಮಕಾತಿಯು ಇತರ ಕಾರ್ಯತಂತ್ರದಲ್ಲಿ ಅನುಸರಿಸುವ ಮಾದರಿ ಇಲ್ಲಿಯೂ ಪ್ರಸ್ತುತವಿದೆ. ನೇರವಾಗಿ ಶಾಲೆ ಅಥವಾ ಎಸ್.ಡಿ.ಎಂ.ಸಿ.ಯವರು ಸ್ವಯಂ ಸೇವಕರನ್ನು ಯಾವ ಕಾರಣದಿಂದಲೂ ನೇಮಿಸಬಾರದು. ಹಾಗು ಲಿಖಿತ ಆದೇಶಗಳನ್ನು ನೀಡಬಾರದು. ಇಲ್ಲವೆ ಗೌರವಧನದ ವಿತರಣೆಯನ್ನು ನೇರವಾಗಿ ಅಭ್ಯರ್ಥಿಗೆ ಮಾಡಬಾರದು. ಬದಲಾಗಿ ಸ್ವಯಂ ಸೇವಕರನ್ನು ಎನ್.ಜಿ.ಓ. ಸಂಸ್ಥೆಗಳ ಮೂಲಕ ಅಥವಾ ಏಜೆನ್ಸಿ ಮೂಲಕ ಅಥವಾ ಸ್ಥಳೀಯ ಸಂಘ ಸಂಸ್ಥೆಗಳ ಮೂಲಕ ಪಡೆದುಕೊಳ್ಳುವುದು. ಆದರೆ ಸ್ವಯಂ ಸೇವಕರ ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಿದಲ್ಲಿ ನೀಡಲಾಗುವ ಅಲ್ಪ ಗೌರವಧನದಲ್ಲಿ ಕಾರ್ಯನಿರ್ವಹಿಸುವ ಸ್ವಯಂ ಸೇವಕರು ದೊರೆಯಬಲ್ಲರು.

ಸ್ವಯಂ ಸೇವಕರ ವಿದ್ಯಾರ್ಹತೆ ಕನಿಷ್ಠ ಎಸ್.ಎಸ್.ಎಲ್.ಸಿ. ಪಾಸ್ ಆಗಿರಬೇಕು. ಶಿಕ್ಷಕರ ತರಬೇತಿಯನ್ನು ಹೊಂದಿರುವ ಸ್ಥಳೀಯ ಮತ್ತು ಎಸ್.ಸಿ./ಎಸ್.ಟಿ./ ಅಲ್ಪಸಂಖ್ಯಾತ ಮಹಿಳಾ ಅಭ್ಯರ್ಥಿಗಳಿಗೆ ಆದ್ಯತೆ ನೀಡುವುದು.

ಸದರಿ ಆಯ್ಕೆ ಪ್ರಕ್ರಿಯೆಯು ಸ್ಥಳೀಯ ಶಾಲೆ / ಎಸ್.ಡಿ.ಎಂ.ಸಿ. ಮತ್ತು ಶಾಲಾ ಮುಖ್ಯಸ್ಥರು ಮಾಡುವುದು. ತಮಗೆ ಅಗತ್ಯವಿರುವ ಸ್ವಯಂ ಸೇವಕರ ಸೇವೆಯನ್ನು ಒದಗಿಸಲು ಸ್ಥಳೀಯ ಸಂಘ ಸಂಸ್ಥೆಗಳಿಗೆ ಮನವಿ ಮಾಡುವುದು. ತಿಂಗಳ ಗೌರವ ಧನವನ್ನು ಚೆಕ್ ಮೂಲಕ ಸಂಬಂಧಿಸಿದ ಅಧ್ಯಕ್ಷರು/ಕಾರ್ಯದರ್ಶಿಯವರ ಹೆಸರಿನಲ್ಲಿ ನೀಡುವುದು.

ಸ್ವಯಂ ಸೇವಕರು ಒಂದು ತಿಂಗಳಿಗೆ ಒಂದು ದಿನದ ರಜೆಯನ್ನು ಪಡೆಯಬಹುದು. ಗೈರುಹಾಜರಿ ಅವಧಿಗೆ ಗೌರವಧನ ನೀಡುವಂತಿಲ್ಲ. ಅಲ್ಲದೆ ಅಂತಹ ಸ್ವಯಂ ಸೇವಕರನ್ನು ತಕ್ಷಣ ಬದಲಾಯಿಸಿ ಪರ್ಯಾಯ ವ್ಯವಸ್ಥೆಯನ್ನು ಸಂಬಂಧಿಸಿದ ಸಂಘ ಸಂಸ್ಥೆಗಳಿಂದ ಪಡೆದುಕೊಳ್ಳಬಹುದು. (ನೋಡಿ ಅನುಬಂಧಿತ ಸುತ್ತೋಲೆಗಳು)

ಶಿಕ್ಷಕರು ಮತ್ತು ಸ್ವಯಂ ಸೇವಕರ ತರಬೇತಿಯನ್ನು 5 ದಿನಗಳ ಅವಧಿಗೆ ಬಿ.ಆರ್.ಸಿ.ಯವರು ಡಯಟ್ ಸಂಸ್ಥೆಯ ಮಾನವ ಸಂಪನ್ಮೂಲವನ್ನು ಪಡೆದು ಸಂಘಟಿಸಬಹುದು. ಇವರ ತರಬೇತಿಯ ವಿಷಯ ವಿಸ್ತಾರ ಕೆಳಗಿನಂತೆ ಇರಬಹುದು.

- ಸೇತುಬಂಧ ಕಾರ್ಯದ ನಿರ್ವಹಣೆ
- ಬಹುವರ್ಗ ಸಂದರ್ಭವನ್ನು ನಿಭಾಯಿಸಲು ತರಬೇತಿ.
- ಟೆಂಟ್ ಶಾಲೆಯ ಮಕ್ಕಳ ಹಿನ್ನೆಲೆ/ಅವರೊಂದಿಗೆ ಪ್ರತಿವರ್ತಿಸುವಾಗ ಗಮನಿಸಬೇಕಾದ ಸಂಗತಿಗಳು.
- ದಾಖಲಾತಿಗಳ ನಿರ್ವಹಣೆ.
- ಮಕ್ಕಳ ಆರೋಗ್ಯ ಮತ್ತು ನೈರ್ಮಲ್ಯದ ಕಡೆಗೆ ಕೊಡಬೇಕಾದ ಗಮನ.
- ದಾಖಲಾತಿ ಕುರಿತು ಕ್ರಮ.

- ಪ್ರಗತಿಯನ್ನು ತಯಾರಿಸುವ ಮತ್ತು ನೀಡುವ ಕ್ರಮ.
- ಪೋಷಕರೊಂದಿಗೆ ಸಂಪರ್ಕ-ಅವರ ವಲಸೆಯ ಜಾಡು ಹಿಡಿಯಲು ಕ್ರಮಗಳು.
- ಸಹ ಪಠ್ಯ ಚಟುವಟಿಕೆಗಳ ಆಯೋಜನೆ.
- ಇತ್ಯಾದಿ.

**ಇಲಾಖೆಯಿಂದ ದೊರೆಯುವ ಸೌಲಭ್ಯಗಳು :**

- ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನ ಉಪಹಾರಗಳನ್ನು ಔಪಚಾರಿಕ ಶಾಲೆಯ ಮಕ್ಕಳಿಗೆ ನೀಡುವಂತೆ ಈ ಮಕ್ಕಳಿಗೂ ನೀಡತಕ್ಕದ್ದು.
- ಬೇಡಿಕೆಯನ್ನು ಟೆಂಟ್ ಶಾಲೆಯ ಅಧ್ಯಾಪಕರೇ ಸಮೀಪ ಶಾಲೆಯ ಮುಖ್ಯೋಪಾಧ್ಯಾಯರಿಗೆ ನೀಡಬೇಕು. ಸಮೀಪ ಶಾಲೆಯ ಮುಖ್ಯಸ್ಥರು ಪ್ರೋತ್ಸಾಹಕ ವಿತರಣೆ ದಾಖಲೆಯಲ್ಲಿ ಟೆಂಟ್ ಶಾಲೆಗಳ ಮಕ್ಕಳ ಹೆಸರನ್ನು ನಮೂದಿಸಿ ಸೌಲಭ್ಯ ವಿತರಿಸಬೇಕು.
- ಇದೇ ರೀತಿ ಮಧ್ಯಾಹ್ನ ಉಪಹಾರದ ಬೇಡಿಕೆಯನ್ನು ಕೂಡ ಪ್ರತಿ ತಿಂಗಳೂ ಸಮೀಪದ ಶಾಲೆಯ ಮುಖ್ಯಸ್ಥರಿಗೆ ನೀಡಬೇಕು ಹಾಗೂ ಸಂವಾದಿಯಾಗಿ ಉಪಯೋಗ ಪ್ರಮಾಣ ಪತ್ರವನ್ನು ಸಮೀಪದ ಶಾಲೆಯ ಮುಖ್ಯಸ್ಥರಿಗೆ ನೀಡತಕ್ಕದ್ದು.
- ಗ್ರಾಮ ಪಂಚಾಯಿತಿ, ಸ್ಥಳೀಯ ಸಂಘ ಸಂಸ್ಥೆಗಳು, ದಾನಿಗಳನ್ನು ಸಂಪರ್ಕಿಸಿ ಗುಡಾರ ಶಾಲೆಯ ಮಕ್ಕಳಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಪ್ರಯತ್ನಿಸುವುದು.

**ಗುಡಾರ ಶಾಲೆಗಳಲ್ಲಿ ನಡೆಯುವ ತರಗತಿಯ ಸಂವಹನ (ಪಠ್ಯಕ್ರಮ/ವಸ್ತು/ಪುಸ್ತಕ) :**

- ಗುಡಾರ ಶಾಲೆಯ ಮೂಲ ಪರಿಕಲ್ಪನೆಯಂತೆ ಇಲ್ಲಿನ ವಿದ್ಯಾರ್ಥಿ ಮೊದಲು ಬೇರೊಂದು ಶಾಲೆಗೆ ದಾಖಲಾಗಿದ್ದು ತನ್ನ ಪೋಷಕರೊಂದಿಗೆ ವಲಸೆ ಬಂದವ/ಳು. ಇಂತಹ ಸಂದರ್ಭ ಸಾರ್ವತ್ರಿಕವಾಗಿದ್ದಾಗ ಪಠ್ಯವಸ್ತುಗಳನ್ನು ನೇರವಾಗಿ ಬಳಸಲು ಅಡ್ಡಿಯಿಲ್ಲ.
- ಆದರೆ ಅಂತಹ ಸಂದರ್ಭ ಆದರ್ಶ ಸನ್ನಿವೇಶದಲ್ಲಿ (Ideal State) ಮಾತ್ರ ಸಾಧ್ಯ. ವಾಸ್ತವಿಕವಾಗಿ ಇಲ್ಲಿನ ಮಕ್ಕಳು ಭಿನ್ನ ಹಿನ್ನೆಲೆಯಿಂದ (ತರಗತಿಗಳು, ಶಾಲೆಗಳು, ಬೇರೆ ಬೇರೆ ಕಲಿಕಾ ಮಟ್ಟದ, ಶಾಲೆಗೇ ಸೇರಿಲ್ಲದ ಇತ್ಯಾದಿ) ಬಂದವರಾಗಿರುತ್ತಾರೆ. ಆದ ಕಾರಣ ಇವರಿಗೆ ಪ್ರಾರಂಭಿಕ ಚಟುವಟಿಕೆಯಾಗಿ ಚಿಣ್ಣರ ಅಂಗಳ ಅಥವಾ ಸೇತುಬಂಧ ಕಾರ್ಯಕ್ರಮವನ್ನು ನಡೆಸುವುದು ಅನಿವಾರ್ಯವಾಗುತ್ತದೆ. ಸಂದರ್ಭಕ್ಕೆ ತಕ್ಕಂತೆ ಇದರ ಅವಧಿಯನ್ನು ಬದಲಾಯಿಸಿಕೊಳ್ಳಲು ಅವಕಾಶ ಇದೆ.
- ಪ್ರಾರಂಭದ ಅವಧಿಯಲ್ಲಿ ಚಿಣ್ಣರ ಅಂಗಳ ಸಾಹಿತ್ಯದ ಪೂರಕ ಚಟುವಟಿಕೆಗಳನ್ನು ಹೆಚ್ಚಾಗಿ ಮಾಡಿಸಿ ಚಿಣ್ಣರ ಅಂಗಳದ ಚಟುವಟಿಕೆ ಮಾಡಿಸಿ. ತರುವಾಯ ಮಕ್ಕಳ ವಯಸ್ಸು ಮತ್ತು ಕಲಿಕಾ ಸಾಮರ್ಥ್ಯಕ್ಕೆ ಅನುಗುಣವಾಗಿ (ಶಾಲೆಯಿಂದ ಹೊರಗುಳಿದ ಮಕ್ಕಳಾಗಿದ್ದಲ್ಲಿ ಮಾತ್ರ) ಅವರು ಯಾವ ತರಗತಿಗೆ ಅರ್ಹರೋ ಆ ತರಗತಿಯ ಪಠ್ಯಬೋಧನೆ ಮಾಡಬೇಕು. ಈಗಾಗಲೇ ಶಾಲೆಗೆ ಹೋದ ಮಕ್ಕಳು ವಲಸೆ ಕಾರ್ಡುಗಳನ್ನು ತಂದಿರುತ್ತಾರೆ. (ಹಾಗೆಂದು ಭಾವಿಸಿದೆ) ಇದರ ಅನುಸಾರ ಆ ಮಗುವಿಗೆ ಸಂಬಂಧಿಸಿದ ತರಗತಿಯ ಪಠ್ಯಪುಸ್ತಕವನ್ನು ಬೋಧಿಸಬಹುದು. ಅನೇಕ ಸಂದರ್ಭಗಳಲ್ಲಿ ಬೇರೆ ಬೇರೆ ಕಾರಣದಿಂದ ಮಗು ವಲಸೆ ಕಾರ್ಡ್ ತಂದಿರುವುದಿಲ್ಲ. ಹಾಗೆಂದು ಆ ವಿದ್ಯಾರ್ಥಿಯನ್ನು ತಿರಸ್ಕರಿಸುವಂತಿಲ್ಲ. ಇಂತಹ ಸಂದರ್ಭದಲ್ಲಿ ಪೋಷಕರ/ಮಗುವಿನ ಹೇಳಿಕೆ ಪಡೆದು-ಮಗುವಿನ ಕಲಿಕೆಯ ಮಟ್ಟ ಆಧರಿಸಿ ಆಯಾ ತರಗತಿಯ ಪಠ್ಯಪುಸ್ತಕ ಬೋಧಿಸಬಹುದು. ವಲಸೆ ಕಾರ್ಡು ಪಡೆಯಲು ಸಂಬಂಧಿಸಿದ ಶಾಲೆಯನ್ನು ಸಂಪರ್ಕಿಸುವುದು.
- ಇಂತಹ ವೇಳೆಯಲ್ಲಿ ಟೆಂಟ್ ಶಾಲೆಯ ಶಿಕ್ಷಕ ಅನೇಕ ಮೂಲಗಳಿಂದ ಮಗು ಕಲಿಯುತ್ತಿದ್ದ ತರಗತಿಯನ್ನು ಸ್ವೀಕರಿಸಿಕೊಳ್ಳಬೇಕು. ಉದಾಹರಣೆಗೆ ಮಗುವಿನ ಬಳಿಯಿರುವ ಪಠ್ಯಪುಸ್ತಕಗಳು, ಮಗುವಿನ ಕಲಿಕೆಯ ಸಾಮರ್ಥ್ಯ, ಪೋಷಕರ ಹೇಳಿಕೆ,

ಮಗುವಿನ ಹೇಳಿಕೆ, ಮೂಲ ಶಾಲೆ ಸಂಪರ್ಕ (ಅಂಚೆ ಮೂಲಕ), ಇತ್ಯಾದಿ ತಂತ್ರಗಳಿಂದ ತಿಳಿದು ಸಂಬಂಧಿಸಿದ ಪಠ್ಯಪುಸ್ತಕವನ್ನು ಬೋಧಿಸಬಹುದು. (ನೋಡಿ ಅನುಬಂಧ ವಲಸೆ ಕಾರ್ಡಿನ ಮಾದರಿಗಾಗಿ).

- ಟೆಂಟ್ ಶಾಲೆಯಿಂದ ಮಗು ಹೋಗುವಾಗ ವಲಸೆ ಕಾರ್ಡ್‌ಗಳನ್ನು ತಪ್ಪದೆ ತುಂಬಿ ಕಳುಹಿಸಬೇಕು. ಈ ವಲಸೆ ಕಾರ್ಡಿನಲ್ಲಿ ನಮೂದಿಸಿರುವ ಪ್ರಗತಿಯಂತೆ ಮೂಲ ಶಾಲೆಯ ಶಿಕ್ಷಕ ಫಲಿತಾಂಶ ನೀಡಬಹುದು.
- ಒಂದು ವೇಳೆ ಮಗು ಶೈಕ್ಷಣಿಕ ವರ್ಷಾಂತ್ಯದ ನಂತರವೂ ಮುಂದುವರೆಯಲ್ಪಟ್ಟರೆ ಹತ್ತಿರದ ಶಾಲೆಗೆ ದಾಖಲಿಸಿ ಮಗುವಿನ ಕಲಿಕಾ ಪ್ರಗತಿಗೆ ಅನುಗುಣವಾಗಿ ಉತ್ತೀರ್ಣತೆಯನ್ನು ನಿಯಮಾನುಸಾರ ನೀಡಬೇಕು. ಶಾಲೆಗೆ ಒಮ್ಮೆ ದಾಖಲಾದರೆ-ದಾಖಲಾದ ಮಕ್ಕಳಿಗೆ ಇರುವ ಎಲ್ಲ ನಿಯಮಗಳು ಈ ಮಗುವಿಗೆ ಅನ್ವಯವಾಗುತ್ತವೆ. ಆದರೆ ತನ್ನ ವ್ಯಾಸಂಗವನ್ನು ಟೆಂಟ್ ಶಾಲೆಯಲ್ಲಿ ಮಾಡುತ್ತದೆ. ಪ್ರಗತಿಯನ್ನು ಕಾಲಕಾಲಕ್ಕೆ ಹತ್ತಿರದ ಶಾಲೆಗೆ ಕಳುಹಿಸುವ ವ್ಯವಸ್ಥೆ ಏರ್ಪಡುತ್ತದೆ.
- ತಾತ್ವಿಕವಾಗಿ ಗುಡಾರ ಶಾಲೆಗಳ ತರಗತಿಯ ಸಂವಹನ-ಔಪಚಾರಿಕ ಶಾಲೆಗಳಲ್ಲಿ ಇರುವಂತೆ ಇರುತ್ತದೆ. ಒಂದು ಸುಧಾರಿತ ಶಾಲೆ (Improvised School) ಶಾಲೆಯ ಎಲ್ಲಾ ಚಟುವಟಿಕೆಗಳೂ ಇಲ್ಲಿ ನಡೆಯಬೇಕು.
- ಸಹ ಪಠ್ಯಚಟುವಟಿಕೆಗಳು ಮಕ್ಕಳ ಕಲಿಕೆಯನ್ನು ಪ್ರೋತ್ಸಾಹಿಸುತ್ತವೆ ಎಂಬುದು ಅನುಭವಿ ಅಧ್ಯಾಪಕರ ಅಭಿಪ್ರಾಯ. ಈ ಮಾಧ್ಯಮವನ್ನು ಸಮರ್ಥವಾಗಿ ದುಡಿಸಿಕೊಳ್ಳಬೇಕಾದ ಹೊಣೆಗಾರಿಕೆ ಟೆಂಟ್ ಶಾಲೆಯ ಶಿಕ್ಷಕನ ಮೇಲಿದೆ. ಇಲ್ಲಿನ ಮಕ್ಕಳು ವ್ಯಾವಹಾರಿಕವಾಗಿ ಬದುಕು ಮತ್ತು ಮಣ್ಣಿಗೆ ಹತ್ತಿರವಾಗಿ ಬದುಕುತ್ತಾರೆ. ಅವರ ಅನುಭವದ ನೆಲಗಟ್ಟಿನ ಮೇಲೆ ನಮ್ಮ ತರಗತಿಯ ಸಂವಹನದ ವಿಧಿ-ವಿಧಾನಗಳ ಅಳವಡಿಕೆಯಾಗಬೇಕು. ಅರ್ಥಾತ್ ಅವರ ಅನುಭವದ ಪರಿಧಿಯಲ್ಲಿ ಬರುವ ಸಂಗತಿಗಳನ್ನು ಆಧರಿಸಿ ಉದಾಹರಣೆ ನೀಡುವುದು, ಸಮಸ್ಯೆ ಬಿಡಿಸುವುದು, ಇಂತಹ ಕ್ರಮಗಳಿಂದ ಪಠ್ಯವಸ್ತು ಮಗುವಿಗೆ ಹತ್ತಿರವಾಗುತ್ತದೆ ಮತ್ತು ಕಲಿಕೆ ಸುಲಭ ಎನಿಸಬಲ್ಲದು.
- ವಿವಿಧ ಬಗೆಯ ಸ್ಪರ್ಧೆಗಳು, ಸಾಂಸ್ಕೃತಿಕ/ಸಾಹಿತ್ಯಿಕ/ಚಟುವಟಿಕೆಗಳು/ಹೊರಸಂಚಾರ/ರಾಷ್ಟ್ರೀಯ ದಿನಗಳ ಆಚರಣೆ/ ಮಕ್ಕಳ ಅನುಭವ ಹಂಚಿಕೆ/ತಮಗೆ ತಿಳಿದಿರುವ ಹಾಡು/ಕಥೆಗಳ ಹಂಚಿಕೆ ಇಂತಹ ಕಾರ್ಯಕ್ರಮಗಳು ಟೆಂಟ್ ಶಾಲೆಯ ಕಲಿಕೆಯ ವಾತಾವರಣದಲ್ಲಿ ಲವಲವಿಕೆ ಜೀವಂತಿಕೆಯನ್ನು ಮೂಡಿಸಬಲ್ಲವು.
- ಅಧ್ಯಾಪಕ ಮತ್ತು ಸ್ವಯಂ ಸೇವಕ ಇಬ್ಬರೂ ಚಟುವಟಿಕೆಗಳನ್ನು ಹಂಚಿಕೊಂಡು ನಿರ್ವಹಿಸಬಹುದು. ಉದಾಹರಣೆಗೆ ಅಧ್ಯಾಪಕ ಬೋಧನೆಯಲ್ಲಿ ತೊಡಗಿದ್ದಾಗ ಸ್ವಯಂ ಸೇವಕರು ವೈಯಕ್ತಿಕ ಗಮನವನ್ನು ನೀಡಬೇಕಾದ ವಿದ್ಯಾರ್ಥಿಯ ನೆರವಿಗೆ ಹೋಗಲು ವ್ಯವಸ್ಥೆ ಕಲ್ಪಿಸುವುದು ಇತ್ಯಾದಿ.

**ಬೋಧನೆ ಕಲಿಕೆ ಸಾಮಗ್ರಿ ಖರೀದಿ-ಬಳಕೆ-ಎರವಲು :**

- ಟೆಂಟ್ ಶಾಲೆಯ ಮಕ್ಕಳ ಕಲಿಕೆಗೆ ಪೂರಕವೆನಿಸುವ ಬೋಧನಾ ಕಲಿಕಾ ಸಾಮಗ್ರಿಯನ್ನು ಇದಕ್ಕಾಗಿ ನೀಡಿರುವ ಹಣದಿಂದ ಖರೀದಿಸಬಹುದು.
- ಸ್ಥಳೀಯ ದಾನಿಗಳಿಂದ ಅಗತ್ಯ ಎನಿಸಿದ ವಸ್ತುಗಳನ್ನು ಪಡೆದು ಮಕ್ಕಳು ಉಪಯೋಗಿಸುವಂತೆ ತಿಳಿಸಬಹುದು. (ಉದಾಹರಣೆಗೆ ಹಳೆಯ ವೃತ್ತ ಪತ್ರಿಕೆಗಳು, ನಿಯತಕಾಲಿಕೆಗಳು ಇತ್ಯಾದಿ).
- ಸಮೀಪದ ಶಾಲೆಗಳಿಂದ ಅಗತ್ಯವೆನಿಸಿದ ಉಪಕರಣಗಳನ್ನು ಎರವಲು ಪಡೆದು ಉಪಯೋಗಿಸಬಹುದು.
- ಹೊರಾಂಗಣ ಚಟುವಟಿಕೆಗಳಾದ ಕ್ಷೇತ್ರ ಅಧ್ಯಯನ-ವೀಕ್ಷಣೆ-ಇಂತಹ ಚಟುವಟಿಕೆಗಳನ್ನು ಕೈಗೊಳ್ಳಬಹುದು.

**ರೂಢಿಸಬೇಕಾದ ದಾಖಲೆಗಳು :**

| **ಶೈಕ್ಷಣಿಕ** | **ಆಡಳಿತಾತ್ಮಕ** |
|---|---|
| * ಪಠ್ಯಕ್ರಮ ಹಂಚಿಕೆಯ ಯೋಜನೆ | * ಶಿಕ್ಷಕ/ವಿದ್ಯಾರ್ಥಿಗಳ ಹಾಜರಾತಿ ಪುಸ್ತಕ |
| * ಪಠ್ಯ ಯೋಜನೆ | * ವಿವಿಧ ಬಾಬ್ತುಗಳಿಗೆ ಹಣ ಖರ್ಚು ಮಾಡಿದ ವಿವರ ಮತ್ತು ರಸೀತಿಗಳು |
| * ವಲಸೆ ಕಾರ್ಡುಗಳ ಫೈಲ್ | * ಸಂದರ್ಶನ ದಾಖಲೆ |
| * ಮಕ್ಕಳ ಶೈಕ್ಷಣಿಕ ಪ್ರಗತಿಯ ಸಂಚಿತ ದಾಖಲೆ/ಪ್ರಗತಿ ಪತ್ರಗಳು. | |

**ಉಸ್ತುವಾರಿ ಮತ್ತು ವರದಿ ಸಲ್ಲಿಕೆ :**

| ಸಂದರ್ಶಕರು | 10 ದಿನಗಳಿಗೆ | 20 ದಿನಗಳಿಗೆ | ತಿಂಗಳಿಗೆ |
|---|---|---|---|
| ಸಿ.ಆರ್.ಪಿ./ಇ.ಸಿ.ಓ./ಸಿ.ಎ.ಇ.ಓ. | ✓ | – | – |
| ಬಿ.ಆರ್.ಪಿ./ಬಿ.ಆರ್.ಸಿ./ಬಿ.ಇ.ಓ. | – | ✓ | – |
| ಡಯಟ್ ನೋಡಲ್ ಅಧಿಕಾರಿ/ಪ್ರಿನ್ಸಿಪಾಲ್ | – | – | ✓ |
| ಇ.ಓ./ಎಸ್.ಐ./ಎ.ಪಿ.ಸಿ. | – | – | ✓ |
| ಡಿ.ವೈ.ಪಿ.ಸಿ.ಡಿ.ಡಿ.ಪಿ.ಐ | – | – | ✓ |

- ಉಸ್ತುವಾರಿದಾರರು ಟೆಂಟ್ ಶಾಲೆಯ ಭೇಟಿ ವರದಿಗಳನ್ನು ತಮ್ಮ ನಿಕಟ ಮೇಲಧಿಕಾರಿಗಳಿಗೆ ಸಲ್ಲಿಸಬೇಕು.
- ಸಂದರ್ಶನದ ವರದಿಗಳು ಸಮಗ್ರವಾಗಿರಬೇಕು. ಕಲಿಕೆಯ ವಾತಾವರಣ, ಅಧ್ಯಾಪಕರ ತಯಾರಿ, ತರಗತಿಯ ಸಂವಹನ, ಕಲಿಕೆಯ ಮಟ್ಟ ಈ ಕುರಿತು ಸುಧಾರಣೆ/ಬದಲಾವಣೆಗೆ ಸಲಹೆ ನೀಡಬೇಕು. ಅಗತ್ಯವೆನಿಸಿದಾಗ ಬೋಧಿಸಿ ತೋರಿಸುವುದು.

**ಸಂದರ್ಶನ ವರದಿಯು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರಬೇಕು.**

ಟೆಂಟ್ ಶಾಲೆಯ ಪರಿಸರ – ಕಲಿಕೆ ವಾತಾವರಣ.

ಮಕ್ಕಳ ನೈರ್ಮಲ್ಯ

ಕಲಿಕೆಯ ಮಟ್ಟ – ಆಗುತ್ತಿರುವ ಪ್ರಗತಿ

ಖರ್ಚು ವೆಚ್ಚದ ವಿವರಗಳು, ಹಣ ಬಳಕೆ ಸಮರ್ಪಕವಾಗಿ ಆಗುತ್ತಿರುವುದೆ ?

ಮಧ್ಯಾಹ್ನದ ಉಪಹಾರ/ಸ್ನಾಕ್ಸ್ ನೀಡಿಕೆ ಕ್ರಮವಾಗಿದೆಯೆ ?

ವಲಸೆ ಕಾರ್ಡ್‌ಗಳನ್ನು ನೀಡುತ್ತಿರುವರೆ ?

ಇತ್ಯಾದಿ ಸಂಗತಿಗಳ ಕುರಿತು ವಸ್ತುಸ್ಥಿತಿ–ಆಗಬೇಕಾದ ಸುಧಾರಣೆ ಮತ್ತು ಆ ನಿಟ್ಟಿನಲ್ಲಿ ನೀಡಲಾದ ಸಲಹೆಗಳು ದಾಖಲೆಗೊಳ್ಳಬೇಕು.

- ಶೈಕ್ಷಣಿಕ ವರ್ಷಾಂತ್ಯದ ನಂತರವೂ ಟೆಂಟ್ ಶಾಲೆ ಮುಂದುವರೆಯಬೇಕಾದ ಸಂದರ್ಭಗಳು ಕಂಡುಬಂದಲ್ಲಿ ಈ ವಿದ್ಯಾರ್ಥಿಗಳನ್ನು ಸಮೀಪದ ಶಾಲೆಗೆ ಸೇರಿಸುವುದು ಉಚಿತ. ದೂರವನ್ನು ಆಧರಿಸಿ ಸಾರಿಗೆ ಸೌಲಭ್ಯವನ್ನು ಅಗತ್ಯವೆನಿಸಿದಲ್ಲಿ ನೀಡಬಹುದು. ವಲಸಿತ ಮಕ್ಕಳು ಕರ್ನಾಟಕದವರೇ ಆಗಿದ್ದು ವಲಸೆ ಕಾರ್ಡ್‌ನ್ನು ತಂದಿಲ್ಲವಾದರೆ ಮೂಲ ಶಾಲೆಯಿಂದ ತರಿಸಿಕೊಡುವ ಅಥವಾ ಟಿ.ಸಿ. ತರಿಸುವ ಜವಾಬ್ದಾರಿಯು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಶಿಕ್ಷಣ ಅಧಿಕಾರಿಯವರದ್ದಾಗಿದೆ.

ಈ ರೀತಿ ಮುಂದುವರೆಯುತ್ತಿರುವ ಮಕ್ಕಳು ಅನ್ಯ ರಾಜ್ಯದವರಾಗಿದ್ದರೆ ತಾಲ್ಲೂಕು/ಜಿಲ್ಲಾ ಹಂತದ ಅಧಿಕಾರಿಗಳು ಅವರ ಮೂಲ ಶಾಲೆಯಿಂದ ವಲಸೆ ಕಾರ್ಡ್‌ಗಳನ್ನು ತರಿಸಲು ಪ್ರಯತ್ನಿಸಬೇಕು. ಒಂದು ವೇಳೆ ತಮ್ಮ ಈ ಕಾರ್ಯದಲ್ಲಿ ವಿಫಲರಾದಲ್ಲಿ ವಿವರವನ್ನು ನಮೂದಿಸಿ ಎಸ್.ಎಸ್.ಎ. ಕೇಂದ್ರ ಕಛೇರಿಯ ಗಮನಕ್ಕೆ ತರುವುದು.

- ಶೈಕ್ಷಣಿಕ ವರ್ಷಾಂತ್ಯದ ನಂತರವೂ ಅನಿವಾರ್ಯ ಸಂದರ್ಭಗಳಲ್ಲಿ ಮುಂದುವರೆಯುವ ಟೆಂಟ್ ಶಾಲೆಗಳ ಶೈಕ್ಷಣಿಕ ಮೌಲ್ಯಮಾಪನವನ್ನು School Evaluation / School Inspection ತಾಲ್ಲೂಕು/ಜಿಲ್ಲಾ ಮಟ್ಟದ ಅಧಿಕಾರಿಯವರು ನಿರ್ವಹಿಸಬೇಕು. ಇದಕ್ಕಾಗಿ ಅಗತ್ಯ ಎನಿಸಿದಲ್ಲಿ ಆಯಾ ಭಾಷೆ ಬಲ್ಲ ಶಿಕ್ಷಕರ ತಂಡವನ್ನು ರಚಿಸಿ, ಸದರಿ ಮೌಲ್ಯಮಾಪನವನ್ನು ಕೈಗೆತ್ತಿಕೊಳ್ಳಬೇಕು. ಇದಕ್ಕಾಗಿ ಇಲಾಖೆ ಹೊರತಂದಿರುವ ಶೈಕ್ಷಣಿಕ ಮೌಲ್ಯಮಾಪನ ಮಾರ್ಗದರ್ಶಿಯನ್ನು ದಯವಿಟ್ಟು ನೋಡಿ.

**ಎನ್.ಜಿ.ಓ.ಗಳ ಭಾಗವಹಿಸುವಿಕೆ**

- ಈ ಕಾರ್ಯತಂತ್ರದಲ್ಲಿ 06–07ನೇ ಸಾಲಿನಿಂದ ಎನ್.ಜಿ.ಓ.ಗಳು ಭಾಗವಹಿಸುವ ಅವಕಾಶವನ್ನು ಕಲ್ಪಿಸಿಲ್ಲ.

* * * * *